500 ರಿಂದ 750 ಮಿ.ಲೀ ನೀರನ್ನು ಬೆರೆಸಿ ಮಿಶ್ರಣ ಮಾಡಿಕೊಳ್ಳಬೇಕು. ಈ ಮಿಶ್ರಣವು ಮಂದವಾಗಿದ್ದು ಬ್ರಶ್‌ಗೆ ಚೆನ್ನಾಗಿ ಅಂಟಿಕೊಳ್ಳುವಂತೆ ಇರಬೇಕು. ಒಂದು ವೇಳೆ ನೀರು ಜಾಸ್ತಿಯಾಗಿ ತಿಳಿಯಾದಲ್ಲಿ ABC ಲೇಪನವನ್ನು ಸೇರಿಸಿ ಸ್ವಲ್ಪ ಮಂದ ಮಾಡಿಕೊಳ್ಳಬೇಕು. ಇಲ್ಲವೇ ಗಟ್ಟಿಯಾದಲ್ಲಿ ಸ್ವಲ್ಪ ನೀರನ್ನು ಸೇರಿಸಿ ತಿಳಿ ಮಾಡಿಕೊಳ್ಳಬಹುದು. ಈ ರೀತಿ ತಯಾರಾದ ದ್ರಾವಣವನ್ನು 2 ಅಥವಾ 3 ಇಂಚು ಬ್ರಶ್‌ನಿಂದ ಮರದ ಕಾಂಡಕ್ಕೆ ಬಳಿಯಬೇಕು.

## ABC ದ್ರಾವಣವನ್ನು ಬಳಿಯುವ ಮುನ್ನ ಕೆಲವು ಎಚ್ಚರಿಕೆ ಕ್ರಮಗಳು

ABC ದ್ರಾವಣವನ್ನು ಬಳಿಯುವ ಮುನ್ನ ಕಾಂಡ ಕೊರಕದ ರಂಧ್ರಗಳು ಕಂಡು ಬಂದಲ್ಲಿ ಆ ರಂಧ್ರದ ಸುತ್ತಲೂ ಕೊಳೆತಿರುವ ಮರದ ತೊಗಟೆಯನ್ನು ತೆಗೆಯಬೇಕು. ಆದರೆ ಯಾವುದೇ ಕಾರಣಕ್ಕೂ ಆರೋಗ್ಯ ವಾಗಿರುವ ಮರದ ತೊಗಟೆಯನ್ನು ತೆಗೆಯಬಾರದು. ಕೊಳೆತ ತೊಗಟೆ ತೆಗೆದ ಜಾಗದಲ್ಲಿ ಕಪ್ಪಗಿನ ಬೂಸ್ಟ್ Fungus ಕಂಡುಬಂದರೆ ಬಳಕೆ ಮಾಡಿ ಆಬೂಸ್ಟನ್ನು ಸ್ವಚ್ಛ ಮಾಡಿ. ನಂತರ ತುರುಕಬೇಕು. ಹೀಗೆ ಮಾಡುವುದರಿಂದ ರಂಧ್ರದೊಳಗೆ ಇರುವ ಕಾಂಡಕೊರಕವು ಉಸಿರುಗಟ್ಟಿ ಸಾಯುವುದು. ಎರಡನೇದಾಗಿ ABC ಲೇಪನದ ವಾಸನೆಯಿಂದ ಅವು ಕೊರೆಯಲು ಸಾಧ್ಯನಾಗದೆ. ಅವು ಊಟವಿಲ್ಲದೆ ನಿಶಕ್ತಿ ಹೊಂದಿ ನಿರ್ಜೀವವಾಗುವುವು. ಈ ರೀತಿಯಾಗಿ ABC ಲೇಪನವು ಕೀಟನಾಶಕವಿಲ್ಲದೆ ಕೊರಕವನ್ನು ನಿಯಂತ್ರಿಸಬಹುದಾಗಿದೆ.

ರಂಧ್ರಗಳನ್ನು ಸೀಲ್ ಮಾಡಿದ ನಂತರ ABC ಲೇಪನವನ್ನು ದ್ರಾವಣ ರೂಪದಲ್ಲಿ ತಯಾರಿಸಿಕೊಂಡಿರುವುದನ್ನು ಬ್ರಶ್ ಮೂಲಕ ಕಾಂಡಕ್ಕೆ ಬಳಿಯಬೇಕು. ಸುಮಾರು 3 ಅಡಿಯವರೆಗೆ ಚೆನ್ನಗಿ ಲೇಪಿಸಬೇಕು.

## ABC ಲೇಪನವು ಕೀಟವನ್ನು ನಿಯಂತ್ರಿಸುವ ಬಗೆ

ಈಗಾಗಲೇ ತಿಳಿಸಿದಂತೆ ABC ಲೇಪನವು ರಂಧ್ರದೊಳಕ್ಕೆ ಸೇರಿಸಿದಾಗ ಕೊರಕಗಳು ಉಸಿರುಗಟ್ಟಿ ಸಾಯುವುವು. ಒಂದು ವೇಳೆ ಕೊರಕಗಳು ಇಲ್ಲದಿದ್ದ ಪಕ್ಷದಲ್ಲಿ ಆರೋಗ್ಯವಂತ ಮರಗಳಿಗೆ ABC ಲೇಪನ ಮಾಡಿದಾಗ ದುಂಬಿಗಳು ಲೇಪಿಸಿದ ಮರಗಳ ಮೇಲೆ ಮೊಟ್ಟೆ ಇಡಲು ಬರುವುದಿಲ್ಲ. ಏಕೆಂದರೆ ABC ಯಿಂದ ಉಂಟಾಗುವ ಎಣ್ಣೆ ವಾಸನೆಯಿಂದ ದುಂಬಿಗಳು ಅಂತಹ ಮರಗಳ ಬಳಿ ಸುಳಿಯುವುದಿಲ್ಲ. ABC ಲೇಪನ ಬಳಿಯುವ ಮುನ್ನ ಒಂದು ವೇಳೆ ದುಂಬಿಗಳು ಈಗಾಗಲೇ ಮೊಟ್ಟೆಗಳನ್ನು ಇಟ್ಟಿದ್ದರೆ, ಆ ಮೊಟ್ಟೆಗಳು ಕೂಡ ನಾಶಹೊಂದುತ್ತವೆ. ಇದರಿಂದ ಕಾಂಡಕೊರಕದ ದುಷ್ಪರಿಣಾಮವನ್ನು ತಡೆಯುತ್ತದೆ.

## ABC ಲೇಪನವನ್ನು ಯಾವ ಮರಗಳಿಗೆ ಬಳಿಯಬಹುದು?

ABC ಲೇಪನವು ಬ್ಯಾಟ್ರೋಸೀರಾ ರುಪೋಮ್ಯಾಕುಲೇಟ ಎಂಬ ಕಾಂಡ ಕೊರಕದಿಂದ ತುತ್ತಾದ ಎಲ್ಲ ಹಣ್ಣಿನ ಗಿಡಗಳಿಗೂ ಲೇಪಿಸಬಹುದು. ಈ ಕಾಂಡಕೊರಕವು ಮಾವಿಗೆ ಅಷ್ಟೇ ಅಲ್ಲದೆ ಪೇರಲ, ಬೆಣ್ಣೆಹಣ್ಣು, ಹಲಸು, ನುಗ್ಗೆ, ಬೂರಗ ಹಾಗೂ ಇತರೇ ಹಲವಾರು ಮರಗಿಡಗಳಿಗೆ ತಗಲುಬಹುದಾದ ಕಾಂಡಕೊರಕದ ಹಾವಳಿಯನ್ನು ಈ ABC ಲೇಪನವನ್ನು ಬಳಿದು ನಷ್ಟವನ್ನು ತಡೆಯಬಹುದು.


ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

**ಭಾ.ಕೃ.ಅ.ಪ.- ಕೃಷಿ ವಿಜ್ಞಾನ ಕೇಂದ್ರ**

(ಭಾ.ಕೃ.ಅ.ಪ.-ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ)

ಹಿರೇಹಳ್ಳಿ, ತುಮಕೂರು-572 168, ಕರ್ನಾಟಕ

ದೂರವಾಣಿ : 0816-2243175 / 77

ಮಿಂಚಂಚೆ : iihrkvk@gmail.com ಅಂತರ್ಜಾಲ : www.iihrkvk.org



ವಿಸ್ತರಣಾ ಹಸ್ತಪತ್ರಿಕೆ : 27


# ABC ಲೇಪನದಿಂದ ಮಾವಿನಲ್ಲಿ ಕಾಂಡ ಕೊರಕ ನಿವಾರಣೆ






ಟಿ.ಎನ್.ಶಿವಾನಂದ

ಬಿ. ಹನುಮಂತೇಗೌಡ

ಪಿ.ಆರ್.ರಮೇಶ್

ಭಾ.ಕೃ.ಅ.ಪ.- ಕೃಷಿ ವಿಜ್ಞಾನ ಕೇಂದ್ರ

(ಭಾ.ಕೃ.ಅ.ಪ.-ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ)

ಹಿರೇಹಳ್ಳಿ, ತುಮಕೂರು-572 168, ಕರ್ನಾಟಕ



2019–20

# ABC ಲೇಪನದಿಂದ ಮಾವಿನಲ್ಲಿ ಕಾಂಡ ಕೊರಕ ನಿವಾರಣೆ

ಮಾವಿನಲ್ಲಿ ಕಾಂಡ ಕೊರಕದ ಹಾವಳಿ ವಿಪರೀತವಾಗಿದ್ದು ಕಾಂಡ ಕೊರಕದಿಂದ ನಷ್ಟ ಉಂಟಾಗುತ್ತಿದೆ. ಸಾಮಾನ್ಯವಾಗಿ ಕಾಂಡ ಕೊರಕದ ಹಾವಳಿ 10 ವರ್ಷಕ್ಕೆ ಮೇಲ್ಪಟ್ಟ ಮರಗಳಿಗೆ ಬಹುಮಟ್ಟಿಗೆ ಕಾಡುತ್ತಿದ್ದ ಈ ಕೀಟ ಬಾಧೆ ಇತ್ತೀಚೆಗೆ ನಮ್ಮ ಸಂಶೋಧನೆ ಪ್ರಕಾರ 6 ವರ್ಷಕ್ಕೆ ಮೇಲ್ಪಟ್ಟ ಮರಗಳಲ್ಲೂ ಸಹ ಈ ಕೀಟ ಬಾಧೆ ಉಲ್ಬಣಗೊಂಡಿದೆ. ಪ್ರೌಢಾವಸ್ಥೆಯ ಈ ಕೀಟವು ಮರದ ತೊಗಟೆಯ ಮೇಲೆ ಮೊಟ್ಟೆಗಳನ್ನು ಇಡುತ್ತದೆ. ಮರಿಗಳು ಮರದ ತೊಗಟೆಯ ಕೆಳಗೆ ನುಸುಳಿ ಮರದ ಕಾಂಡವನ್ನು ತಿನ್ನಲಾರಂಭಿಸುತ್ತದೆ. ಈ ಕಾರಣದಿಂದ ಕಾಂಡದಲ್ಲಿ ರಂಧ್ರಗಳಾಗಿ, ರಂಧ್ರಗಳು ಸುರಂಗಗಳಾಗಿ ಮಾರ್ಪಟ್ಟು ಕಾಂಡಕ್ಕೆ ವಿಪರೀತ ಹಾನಿ ಉಂಟು ಮಾಡುತ್ತದೆ. ಇಂತಹ ಸನ್ನಿವೇಶದಲ್ಲಿ ಮರದಲ್ಲಿಯ ರೆಂಬೆ ಕೊಂಬೆಯ ತುದಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರುತ್ತವೆ. ಸ್ವಲ್ಪ ಸಮಯದ ನಂತರ ಆ ತುದಿ ರೆಂಬೆ ಕೊಂಬೆಗಳು ನಿಧಾನಕ್ಕೆ ಒಣಗಿ ನಿರ್ಜೀವವಾಗುತ್ತವೆ.



ಮಾವಿನಲ್ಲಿ ಕಾಂಡ ಕೊರಕ



ಕಾಂಡದೊಳಗೆ ಹುಳುವಿನ ಭಾದೆ

## ABC ಲೇಪನ ಎಂದರೇನು?

ABC ಎಂದರೆ ಅರ್ಕಾ ಬೋರಾರ್ ಕಂಟ್ರೋಲ್ ಎಂದು ಹೆಸರಿಸಬಹುದು. ಇದು **ಭಾರತೀಯ ತೋಟಗಾರಿಕಾ ಸಂಶೋದನಾ ಸಂಸ್ಥೆ,** ಹೆಸರಘಟ್ಟ ರವರಿಂದ ಬಿಡುಗಡೆಯಾಗಿದೆ. ಈ ಲೇಪನವು ಈ ಮುಂಚೆ **ಸೀಲರ್ ಕಮ್ ಹೀಲರ್** ಎಂದು ಕರೆಯಲಾಗುತ್ತಿತ್ತು. ಸೀಲರ್ ಕಮ್ ಹೀಲರ್



ಉತ್ಪನ್ನವನ್ನು ಈಗ ಸಾವಯವ ರೀತಿಯಿಂದ ತಯಾರಿಸಲಾಗಿದೆ. ಸೀಲರ್ ಕಮ್ ಹೀಲರ್ ಪುಡಿ ರೂಪದಲ್ಲಿ ಹೊರತರಲಾಗಿತ್ತು ಆದರೆ ABC ಯನ್ನು ಲೇಪನ ಅಥವಾ PASTE ರೂಪದಲ್ಲಿ ಹೂ ಬಿಡುಗಡೆಗೊಳಿಸಲಾಗಿದೆ. ಸೀಲರ್ ಕಮ್ ಹೀಲರ್ ಜೊತೆಗೆ ಕೀಟನಾಶಕ ಬಳಸಲಾಗುತ್ತಿತ್ತು. ಆದರೆ ABC ಲೇಪನಕ್ಕೆ ಕೀಟನಾಶಕದ ಅಗತ್ಯವಿಲ್ಲ. ಸೀಲರ್ ಕಮ್ ಹೀಲರ್‌ನ್ನು ರೈತಬಾಂಧವರು ಪುಡಿಯನ್ನು ನೀರಿನಲ್ಲಿ ಬೆರೆಸಿ ಮರಕ್ಕೆ ಬಳಿದಾಗ ಮಳೆ ಬಂದ ಪಕ್ಷದಲ್ಲಿ ಈ ಪುಡಿಯು ಮಳೆ ನೀರಿಗೆ ತೊಯ್ದು ನೀರಿನ ಜೊತೆ ಕೊಚ್ಚಿ ಹೋಗಿ ಕೊರಕದ ವಿರುದ್ಧ ಪರಿಣಾಮಕಾರಿಯಾಗಿರಲಿಲ್ಲ. ಆದರೆ ಈಗ ಉತ್ತಮವಾಗಿ ABC ಲೇಪನವು ಮಳೆಗೆ ಕೊಚ್ಚಿ ಹೋಗದೆ ಸೀಲರ್ ಕಮ್ ಹೀಲರ್ ಗಿಂತ ಉತ್ತಮವಾದ ಉತ್ಪನ್ನವಾಗಿದೆ.

## ABC ಲೇಪನವನ್ನು ಬಳಸುವ ರೀತಿ

ABC ಲೇಪನವನ್ನು ಹಲವಾರು ಎಣ್ಣೆಗಳನ್ನು ಬಳಸಿ ತಯಾರಿಸಿ ಮಾಡಲಾಗಿದೆ. ಈ ಉತ್ಪನ್ನವು ನೀರಿನಲ್ಲಿ ಕರಗುತ್ತದೆ. ಒಂದು ಕಿಲೋ ABC ಉತ್ಪನ್ನಕ್ಕೆ ಸುಮಾರು



ಮಾವಿನಲ್ಲಿ ಕಾಂಡಕ್ಕೆ ABC ಯಿಂದ ಲೇಪನ ಕೊರಕ